ಮೈಸೂರು ನಗರದ ಚಾಮುಂಡಿ ಬೆಟ್ಟದ ದೇವಾಲಯಕ್ಕೆ ಒದಗಿಸಂವ ಸೌಲಭ್ಯದ ಬಗ್ಗೆ

೨ (೨೩) ಶ್ರೀ ವೇದಾಂತ ಹೆಬ್ಬಿಗೆ (ಕೃಷ್ಣರಾಜ).—ಮಾನ್ಯ ಕಂದಾಯ ಮತ್ತು ಯೋಜನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ಮೈಸೂರು ನಗರದ ಚಾಮುಂಡಿ ಬೆಟ್ಟದ ದೇವಾಲಯ, ಕೊಳ್ಳೇಗಾಲದ ಮಹದೇಶ್ವರ ಬೆಟ್ಟದ ದೇವಾಲಯ, ಬಿಳಿಗಿರಿ ರಂಗನ ಬೆಟ್ಟದ ದೇವಾಲಯಗಳಿಂದ ಪ್ರತಿ ವರ್ಷ ಬರುತ್ತಿರುವ ಆದಾಯವೆಷ್ಟು ; ಇಲ್ಲಿಯ ನೌಕರರಿಗೆ ಕೊಡುತ್ತಿರುವ ವೇತನ ಶ್ರೇಣಿ ಎಷ್ಟು ?

ಆ) ಚಾಮುಂಡಿ ಬೆಟ್ಟ ಹಾಗೂ ಬಿಳಿಗಿರಿರಂಗನ ಬೆಟ್ಟದಲ್ಲಿ ಭಕ್ತಾದಿಗಳಿಗೆ ಸರಕಾರದವರು ಕಲ್ಪಿಸಿರುವ ವಸತಿ ಸೌಕರ್ಯಗಳೇನು ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಯೋಜನಾ ಮತ್ತು ಕಾರ್ಮಿಕ ಮಂತ್ರಿಗಳು).—

ಅ) ಉತ್ತರ ಲಗತ್ತಿಸಿದೆ.

ಆ) ಶ್ರೀ ಚಾಮುಂಡೇಶ್ವರಿ ದೇವಸ್ಥಾನ ಚಾಮುಂಡಿ ಬೆಟ್ಟ, ಮೈಸೂರು:—ಸರ್ಕಾರದ ವತಿಯಿಂದ ಯಾವುದೇ ವಸತಿ ಸೌಕರ್ಯ ಇರುವುದಿಲ್ಲ, ದೇವಸ್ಥಾನದ ವತಿಯಿಂದ ಕಲ್ಯಾಣ ಮಂಟಪ ಮತ್ತು ವಸತಿ ಗೃಹಗಳನ್ನು ಕಟ್ಟುವ ಯೋಜನೆ ಇದೆ.

ಶ್ರೀ ಬಿಳಿಗಿರಿ ರಂಗನಾಥಸ್ವಾಮಿ ದೇವಸ್ಥಾನ ಬಿಳಿಗಿರಿರಂಗನ ಬೆಟ್ಟ:—ಸರ್ಕಾರದ ವತಿಯಿಂದ ಯಾವುದೇ ವಸತಿ ಸೌಕರ್ಯ ಇರುವುದಿಲ್ಲ. ದೇವಸ್ಥಾನಕ್ಕೆ ಸೇರಿದ ಎ.ಬಿ.ಸಿ. ಕಾಟೇಜುಗಳಿವೆ ಹಾಗೂ ಇದರಲ್ಲಿ ೫ ರೂಮುಗಳಿವೆ.

೨ (೫) ನೆಯ ಪ್ರಶ್ನೆಗೆ ಉತ್ತರ:—

ತಃಖ್ತೆ

ಕ್ರಮ ಸಂಖ್ಯೆ	ದೇವಸ್ಥಾನದ ಹೆಸರು	ವಾರ್ಷಿಕ ಆದಾಯ	ನೌಕರರ ಸಂಖ್ಯೆ	ವೇತನ ಶ್ರೇಣಿ
೧)	ಚಾಮುಂಡೇಶ್ವರಿ ದೇವಸ್ಥಾನ ಚಾಮುಂಡಿ ಬೆಟ್ಟ ಮತ್ತು ಇತರೆ ಸಮೂಹ ದೇವಸ್ಥಾನಗಳು	೧೯೮೫-೮೬ ೨೧,೫೩,೭೮೭-೯೦	೯೩	೧) ನಿರ್ವಾಹಕ ಅಧಿಕಾರಿ ೯೨೦-೧೭೫೦ (ಸರ್ಕಾರಿ ನೌಕರರು) ೨) ಪೇಷ್ಕಾರ್ ಆಗವಿಾಕರು ಅರ್ಚಕರು ೩೦೦-೧೫-೩೯೦-೨೦-೫೫೦ ೩) ಗುಮಾಸ್ತರು ಅರ್ಚಕರು ಅಡಿಗೆಯವರು ಪಾರುಪತ್ತೆದಾರರು ೨೫೦-೧೦-೩೦೦-೧೫-೩೯೦-೨೦-೪೫೦ ೪) ಪರಿಚಾರಿಕೆ : ಶ್ರೀಪಾದ ವಾಲಗದವರು, ಕಾವಲು ಗಾರರು ಜಪಾನರು ಇತರೆ, ೧೫೦-೧೦-೩೦೦-೧೫-೩೬೦ ೫) ಪರಿಚಾರಕರು ಸರದಿ ಮೇಲೆ ಇರುವವರು ಶ್ರೀಪಾದ ಕಾವಲುಗಾರರು ಇತರೆ ೧೨೦-೧೦-೩೦೦ ೬) ಇತರೆ ನೌಕರರಿಗೆ ೧೦೦-೧೦-೨೫೦

1	2	3	4	5
				ಕಛೇರಿ ಸಿಬ್ಬಂದಿ :
೨)	ಶ್ರೀ ಮಲ್ಲೆ ಮಹದೇಶ್ವರ ದೇವಸ್ಥಾನ ಮಲ್ಲೆ ಮಹದೇಶ್ವರ ಬೆಟ್ಟ ಕೊಳ್ಳೇಗಾಲ ತಾಲ್ಲೂಕು	೧೯೪೫-೪೬ ೬೧,೯೧,೪೭೮-೦೦	೧೨೭	ನಿರ್ವಾಹಕ ಅಧಿಕಾರಿ—೧೯೫೦-೨೪೫೦ (ಸರ್ಕಾರಿ ನೌಕರರು) ೧) ಕಿರಿಯ ಅಭಿಯಂತರು ೭೫೦-೧೫೦೦(ಸರ್ಕಾರಿ ವೇತನ ಶ್ರೇಣಿ) ೨) ಅಧೀಕ್ಷಕರು ೪೬೦-೧೬೫೦ ,, ೩) ಲೆಕ್ಕಿಗರು :ಪ್ರ. ದ. ಗು ೬೩೦-೧೨೦೦ ,, ೪) ದಿ.ದ.ಗು. ಬೆರೆಳಚ್ಚುಗಾರರು ೪೯೦-೯೫೦ ,, ೫) ಕಾರು ಚಾಲಕ ೪೧೦-೬೦೦ ,, ೬) ಜವಾನರು ೩೯೦-೫೫೦ ,, ೭) ದೇವಸ್ಥಾನದ ಸಿಬ್ಬಂದಿ ವ್ಯವಸ್ಥಾಪಕರು ಮತ್ತು ಇತರೇ } ೪೦೦-೧೦-೪೬೦-೧೫-೫೫೦-೬೧೦ ೮) ಪಸತಿ ಗೃಹದ ಸಿಬ್ಬಂದಿ ೩೬೦-೫-೪೦೦-೧೦-೪೬೦-೧೫-೫೫೦ ೯) ಅರ್ಚಕರು. ಮೇಸ್ತ್ರಿ ಇತರೇ ೩೦೦-೪-೩೨೦-೮-೩೮೪-೧೨-೪೮೦ ೧೦) ಪೂಹೆಯಾನ ನಿಗದಿತ ವೇತನದ ಮೇಲೆ ಕೆಲಸ ಮಾಡುವವರಿಗೆ } ೧೦೦ ರೂ.ಗಳಿಂದ ೪೫೦
೩)	ಶ್ರೀ ಬಿಳಿಗಿರಿ ರಂಗನಾಥಸ್ವಾಮಿ ದೇವಸ್ಥಾನ ಬಿಳಿಗಿರಿರಂಗನ ಬೆಟ್ಟ ಯಳಂದೂರು ತಾಲ್ಲೂಕು	೧೯೪೫-೪೬ ೮೨,೭೫೨-೦೦	೪೫	ವೇತನ ಶ್ರೇಣಿ ಇಲ್ಲ ಪೂಹೆಯಾನ ನಿಗದಿತ ವೇತನ ಕೊಡಲಾಗುತ್ತದೆ.

ಶ್ರೀ ವೇದಾಂತ ಹೆಮ್ಮಿಗೆ.—ಮಾನ್ಯ ಅಧ್ಯಕ್ಷರೆ, ನಾನು ಮೈಸೂರು ನಗರದ ಚಾಮುಂಡಿ ಬೆಟ್ಟದ ದೇವಾಲಯ, ಕೊಳ್ಳೇಗಾಲದ ಮಹದೇಶ್ವರ ಬೆಟ್ಟದ ದೇವಾಲಯ, ಬಿಳಿಗಿರಿ ರಂಗನ ಬೆಟ್ಟದ ದೇವಾಲಯಗಳಿಂದ ಪ್ರತಿವರ್ಷ ಬರುತ್ತಿರುವ ಆದಾಯವೆಷ್ಟು ಎಂದು ಪ್ರತಿಯೊಂದು ದೇವಸ್ಥಾನದ ಬಗ್ಗೆ ಪ್ರಶ್ನೆ ಕೇಳಿದ್ದೇನೆ. ಉತ್ತರದಲ್ಲಿ ಚಾಮುಂಡೇಶ್ವರಿ ದೇವಸ್ಥಾನ ಚಾಮುಂಡಿ ಬೆಟ್ಟ ಮತ್ತು ಇತರೇ ಸಮೂಹ ದೇವಸ್ಥಾನಗಳ ವಾರ್ಷಿಕ ಆದಾಯ ಒಟ್ಟಿಗೆ ೨೧,೫೫,೭೮೭-೯೦ ರೂಪಾಯಿಗಳು ಎಂದು ಹೇಳಿದ್ದಾರೆ. ನಾನು ಕೇಳಿರುವುದು ಪ್ರತಿ ದೇವಸ್ಥಾನಕ್ಕೆ ಎಷ್ಟು ಆದಾಯ ಬರುತ್ತದೆ ಎಂದು. ಆದ್ದರಿಂದ ನನ್ನ ಉದ್ದೇಶ ಫಲದಾಯಕವಾಗಿಲ್ಲ. ಯಾವುದಕ್ಕೆ ಖರ್ಚುಮಾಡಿದ್ದಾರೆ ಎನ್ನುವುದನ್ನು ಹೇಳಿದ್ದಾರೆ. ಒಟ್ಟಿಗೆ ಸಮೂಹ ದೇವಸ್ಥಾನಗಳು ಎಂದರೆ ಯಾವುದು? ಚಾಮುಂಡಿ ಬೆಟ್ಟಕ್ಕೂ ಮಹದೇಶ್ವರ ಬೆಟ್ಟಕ್ಕೂ ಯಾವ ಸಂಬಂಧ? ಚಾಮುಂಡಿ ಬೆಟ್ಟಕ್ಕೂ ಬಿಳಿಗಿರಿರಂಗನ ಬೆಟ್ಟಕ್ಕೂ ಏನು ಸಂಬಂಧ? ಸಮೂಹ ದೇವಸ್ಥಾನಗಳು ಅಂದರೆ ಏನು ಅರ್ಥ? ಚಾಮುಂಡಿಬೆಟ್ಟ ಮತ್ತು ಆದರ ಸುತ್ತಮುತ್ತ ದೇವಸ್ಥಾನಗಳಿದ್ದರೆ ಸಮೂಹ ದೇವಸ್ಥಾನಗಳು ಎಂದು ಕನ್ನಡದಲ್ಲಿ ಅರ್ಥ ಇದೆ. ಆದರೆ ಇಲ್ಲಿ ಚಾಮುಂಡಿಬೆಟ್ಟ ಮೈಸೂರು ನಗರದಲ್ಲಿದೆ, ಬಿಳಿಗಿರಿರಂಗನಬೆಟ್ಟ ಚಾಮರಾಜನಗರಕ್ಕೆ ಸೇರಿದೆ, ಮಹದೇಶ್ವರ ಬೆಟ್ಟದ ದೇವಾಲಯ ಕೊಳ್ಳೇಗಾಲದಲ್ಲಿದೆ. ಇದಕ್ಕೆ ಸಮೂಹ ದೇವಸ್ಥಾನಗಳು ಅಂದರೆ ಏನು? ಆದರಿಂದ ಈ ವಿವಿಧ ದೇವಸ್ಥಾನಗಳಿಂದ ಪ್ರತಿ ವರ್ಷ ಎಷ್ಟೆಷ್ಟು ಆದಾಯ ಬರುತ್ತದೆ ಎಂದು ಹೇಳುತ್ತೀರಾ?

ಶ್ರೀ ಎ. ಲಕ್ಷ್ಮೀಸಾಗರ್.—ಸನ್ಮಾನ್ಯ ಅಧ್ಯಕ್ಷರೇ, ಅವರು ಕೇಳಿದ ಪ್ರಶ್ನೆಗೆ ಉತ್ತರ ಕೊಟ್ಟಿದ್ದೇನೆ. ಮೂರು ದೇವಸ್ಥಾನಗಳ ಬಗ್ಗೆ ಪ್ರಶ್ನೆ ಕೇಳಿದ್ದಾರೆ. ಈ ಮೂರು ದೇವಸ್ಥಾನಗಳಿಂದ ಎಷ್ಟು ಆದಾಯ ಬರುತ್ತದೆ ಎಂಬುದರ ತಖ್ತೆ ಕೊಟ್ಟಿದ್ದೇನೆ ಮತ್ತು ಉತ್ತರದಲ್ಲಿ ಲಗತ್ತಿಸಿದೆ ಎಂದು ಹೇಳಿದ್ದೇನೆ. ಅದೇರೀತಿ ಮೂರು ದೇವಸ್ಥಾನಗಳ ವಿವರವಾದಂಥ ಆದಾಯ ಕೊಟ್ಟಿದ್ದೇನೆ.

ಶ್ರೀ ವೇದಾಂತ ಹೆಮ್ಮಿಗೆ.—ಮೈಸೂರು ನಗರದ ಚಾಮುಂಡಿಬೆಟ್ಟಕ್ಕೆ ಇಡೀ ಕರ್ನಾಟಕದಿಂದ ಮಾತ್ರವಲ್ಲ ಇಡೀ ದೇಶದಿಂದ ಯಾತ್ರಾರ್ಥಿಗಳು ಬರುತ್ತಾರೆ. ಮೈಸೂರು ನಗರದಲ್ಲಿರುವ ಚಾಮುಂಡಿಬೆಟ್ಟಕ್ಕೆ ಯಾರೇ ಬರಲಿ ಅವರು ಇಳಿದುಕೊಳ್ಳಲಿಕ್ಕೆ ಒಂದೂ ಸೌಕರ್ಯ ಇಲ್ಲ. ಇದುವರೆಗೆ ಪಸತಿಗಾಗಿ ಕಟ್ಟಡಗಳನ್ನು ಏಕೆ ಕಟ್ಟಿಲ್ಲ? ದೇವಸ್ಥಾನದ ಪತಿಯಿಂದ ಕಲ್ಯಾಣ ಮಂಟಪ ಮತ್ತು ವಸತಿ ಗೃಹಗಳನ್ನು ಕಟ್ಟುವ ಯೋಜನೆ ಇದೆ ಎಂದು ಹೇಳಿದ್ದೀರಿ. ಯಾತ್ರಾರ್ಥಿಗಳ ಸೌಕರ್ಯಕ್ಕಾಗಿ ಕಲ್ಯಾಣ ಮಂಟಪ ಮತ್ತು ವಸತಿ ಗೃಹಗಳನ್ನು ಯಾವಾಗ ಕಟ್ಟುತ್ತೀರಿ? ಅದೇರೀತಿ ಬಿಳಿಗಿರಿರಂಗನಬೆಟ್ಟಕ್ಕೆ ಆಲ್ಲಿನ ಸೌಂದರ್ಯವನ್ನು, ಮತ್ತು ಪರಿಸರವನ್ನು ನೋಡಲಿಕ್ಕೆ ಇಡೀ ದೇಶದಿಂದ ಜನಗಳು ಬರುತ್ತಾರೆ. ಅಲ್ಲಿ ದೇವಸ್ಥಾನಕ್ಕೆ ಸೇರಿದ ಎ.ಬಿ.ಸಿ. ಕಾಟೇಜುಗಳಿವೆ ಹಾಗೂ ಇದರಲ್ಲಿ ೫ ರೂಮುಗಳಿವೆ ಎಂದು ಹೇಳಿದ್ದೀರಿ. ಬಿಳಿಗಿರಿರಂಗನಬೆಟ್ಟಕ್ಕೆ ಪ್ರತಿ ದಿವಸ ೨೦೦, ೩೦೦ ಯಾತ್ರಾರ್ಥಿಗಳು ಬರುತ್ತಾರೆ. ಅವರಿಗೆ ಇದು ಸಾಲುತ್ತದೆಯೇ? ಇದು ಕಂದಾಯ ಇಲಾಖೆ ಮತ್ತು ಮುಜರಾಯಿ ಇಲಾಖೆಗೆ ಸಂಬಂಧಪಟ್ಟ ವಿಷಯ. ಮಹದೇಶ್ವರ ಬೆಟ್ಟದಲ್ಲಿ ೫ ಛತ್ರಗಳಿವೆ. ಚಾಮುಂಡೇಶ್ವರಿ ಬೆಟ್ಟದಲ್ಲಿ ಒಂದು ರೂಮೂ ಇಲ್ಲ. ಆದ್ದರಿಂದ ಈ ಯೋಜನೆಗಳನ್ನು ಯಾವಾಗ ಕೈಗೆತ್ತಿಗೊಳ್ಳುತ್ತೀರಿ ಮತ್ತು ಶೀಘ್ರವಾಗಿ ಕೈಗೆತ್ತಿಕೊಳ್ಳುತ್ತೀರಾ ?

ಶ್ರೀ ಎ. ಲಕ್ಷ್ಮೀಸಾಗರ್.—ಚಾಮುಂಡೇಶ್ವರಿ ಬೆಟ್ಟದಲ್ಲಿ ಕಲ್ಯಾಣ ಮಂಟಪ ಮತ್ತು ವಸತಿ ಗೃಹಗಳನ್ನು ಕಟ್ಟುವ ಯೋಜನೆ ಇದೆ ಎಂದು ಉತ್ತರದಲ್ಲಿ ಹೇಳಿದ್ದೇನೆ. ಬಿಳಿಗಿರಿರಂಗನಬೆಟ್ಟದ ಬಗ್ಗೆ ಸದ್ಯಕ್ಕೆ ಯಾವುದೂ ಇಲ್ಲ. ಸೂಚನೆಯನ್ನು ಪರಿಶೀಲಿಸಲಾಗುತ್ತದೆ ಎಂದು ಮಾನ್ಯ ಸದಸ್ಯರಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ವೇದಾಂತ ಹೆಮ್ಮಿಗೆ.—ಸ್ವಾಮಿ, ಪ್ರವಾಸೋದ್ಯಮ ಇಲಾಖೆ ಇದೆ. ಆ ಇಲಾಖೆಗೆ ಪ್ರವಾಸಿಗರಿಂದ ಸಾಕಷ್ಟು ಆದಾಯ ಕೂಡ ಬರುತ್ತದೆ. ಬಿಳಿಗಿರಿರಂಗನಬೆಟ್ಟಕ್ಕೆ ಸಾಕಷ್ಟು ಜನ ಪ್ರವಾಸಿಗರು ಹೋಗುತ್ತಾರೆ. ಪ್ರವಾಸೋದ್ಯಮ ಇಲಾಖಾ ಮತಿಯಿಂದ ಕನಿಷ್ಟಪಕ್ಷ ೫೫ ರೂಮುಗಳು ಇರತಕ್ಕ ಒಂದು ಕಟ್ಟಡವನ್ನು ಕಟ್ಟಿಸಿ, ಪ್ರವಾಸಿಗರಿಗೆ ಅನುಕೂಲ ಮಾಡಿಕೊಡುವ ಬಗ್ಗೆ ಸರ್ಕಾರದವರು ಪ್ರಯತ್ನ ಮಾಡುವರೆ ?

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಸದಸ್ಯರ ಸೂಚನೆಯನ್ನು ನಾನು ಗಮನದಲ್ಲಿಟ್ಟು ಕೊಳ್ಳುತ್ತೇನೆ.

ಶ್ರೀ ಹೆಚ್.ಎಲ್. ತಿಮ್ಮೇಗೌಡ.—ಮಹದೇಶ್ವರಬೆಟ್ಟದಲ್ಲಿ ವಸತಿಗೃಹಗಳು ಇವೆ. ತಿರುಪತಿಯಲ್ಲಿ ಆದಂತೆ ಕಮರ್ಷಿಯಲೈಸ್ ಆದರೆ ಅದರ ಪಾವಿತ್ರ್ಯತೆ ಹೋಗುತ್ತದೆ. ಇರತಕ್ಕ ವಸತಿ ಗೃಹಗಳನ್ನು ಉತ್ತಮ ಪಟ್ಟದಲ್ಲಿ ನೋಡಿಕೊಂಡು; ದೇವಸ್ಥಾನದ ಪಾವಿತ್ರ್ಯತೆಯನ್ನು ನೋಡಿಕೊಳ್ಳತಕ್ಕ ಜವಾಬ್ದಾರಿಯನ್ನು ಸರ್ಕಾರ ತೆಗೆದುಕೊಳ್ಳುತ್ತದೆಯೇ ?

ಶ್ರೀ ಎ. ಲಕ್ಷ್ಮೀಸಾಗರ್.—ಗಮನದಲ್ಲಿಟ್ಟುಕೊಳ್ಳುತ್ತೇನೆ.

ಶ್ರೀಮತಿ ಮುಕ್ತಾರುನ್ನೀಸಾ ಬೇಗಂ.—ಮಾನ್ಯ ಅಧ್ಯಕ್ಷರೇ, ನಾನು ಒಂದೇ ಪ್ರಶ್ನೆಯನ್ನು ಕೇಳುತ್ತೇನೆ.

ಶ್ರೀ ಎಂ.ಎಸ್. ಕೃಷ್ಣನ್.—ಅಧ್ಯಕ್ಷರೇ, ಕಾರ್ಮಿಕ ಮಂತ್ರಿಗಳು ಇರಬೇಕಾಗಿತ್ತು.

ಅಧ್ಯಕ್ಷರು.—ತಾವು ಕೂತುಕೊಳ್ಳಿ, ಮೇಡಂರವರನ್ನು ಕರೆದಿದ್ದೇನೆ.

(ಗೊಂದಲ)

ಶ್ರೀ ಎನ್.ಎಂ. ಅಡ್ಯಾಂತಾಯ.—ಸ್ವಾಮಿ, ಮೂರು ಸಲ ಪ್ರಶ್ನೆ ಮುಂದಕ್ಕೆ ಹಾಕಿ ಇಪತ್ತು ಬಂದಿದೆ. ಈ ರೀತಿ ಉತ್ತರ ಕೊಟ್ಟರೆ ಹೇಗೆ ?

ಅಧ್ಯಕ್ಷರು.—ನಾನು ಬೇಗಂರವರನ್ನು ಕರೆದಿದ್ದೇನೆ, ತಾವು ಕೂತುಕೊಳ್ಳಿ. ತಮಗೂ ಅವಕಾಶ ಕೊಡುತ್ತೇನೆ.

ಶ್ರೀ ಎಂ.ಎಸ್. ಕೃಷ್ಣನ್.—ತಾವು ನಮ್ಮ ರಕ್ಷಣೆಗೆ ಬರಬೇಕು. ಕಾರ್ಮಿಕ ಮಂತ್ರಿಗಳಿಗೆ ಸಂಬಂಧಪಟ್ಟಂತೆ ಪ್ರಶ್ನೆ ಕೇಳಲಾಗಿದೆ. ಇದು ಬಹಳ ಗಹನವಾದ ವಿಚಾರ. ಸದನದಲ್ಲಿ ಕಾರ್ಮಿಕ ಮಂತ್ರಿಗಳು ಇರಬೇಕಾಗಿತ್ತು.

ಕೃಷ್ಣರಾಜೇಂದ್ರ ಮಿಲ್ಸ್ ಮುಚ್ಚಿರುವ ಬಗ್ಗೆ

೩(೬೮) ಶ್ರೀಮತಿ ಮುಕ್ತಾರ್ ಉನ್ನೀಸಾ (ನರಸಿಂಹರಾಜ).—ಮಾನ್ಯ ಕಂದಾಯ, ಯೋಜನಾ ಹಾಗೂ ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ೧೯೪೪ರಿಂದ ಮೈಸೂರಿನ ಶ್ರೀ ಕೃಷ್ಣರಾಜೇಂದ್ರ ಮಿಲ್ಸ್ ಮುಚ್ಚಿರುವುದು ವಾಸ್ತವ್ಯವೇ?

ಆ) ಸರ್ಕಾರಕ್ಕೆ ಈ ಮುಚ್ಚಿರುವಿಕೆಯಿಂದ ೩,೦೦೦ ಕೆಲಸಗಾರರು ಹಾಗೂ ೨೦,೦೦೦ ಅವಲಂಬಿಗಳು ಅನೇಕ ಕಷ್ಟಗಳಿಗೆ ತುತ್ತಾಗಿದ್ದಾರೆ ಎಂಬುದು ಗೊತ್ತಿದೆಯೇ?

ಇ) ೧೯೫೨ ಆಗಸ್ಟ್ ೧೯೬೨ರಂದು ಮಾನ್ಯ ಮುಖ್ಯ ಮಂತ್ರಿಗಳು ಮೈಸೂರಿಗೆ ಭೇಟಿ ಕೊಟ್ಟಾಗ ಉದ್ಯಮವನ್ನು ಪುನಃ ತೆರೆಯಲು ಕ್ರಮ ತೆಗೆದುಕೊಳ್ಳುವುದಾಗಿ ಭರವಸೆ ಕೊಟ್ಟಿರುವುದು ನಿಜವೇ?

ಈ) ಹಾಗಿದ್ದರೆ ಸರ್ಕಾರ ತೆಗೆದುಕೊಂಡ ಕ್ರಮವೇನು?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ, ಯೋಜನಾ ಮತ್ತು ಕಾರ್ಮಿಕ ಮಂತ್ರಿಗಳು).—

ಅ) ಹೌದು.

ಆ) ಆಗಿರುವ ಕಷ್ಟ ಗೊತ್ತಿದೆ.

ಇ) ಹೌದು.

ಈ) ಈ ಉದ್ಯಮವನ್ನು ಪುನಃ ತೆರೆಸಲು ಸರ್ಕಾರ ತನ್ನ ಪ್ರಯತ್ನಗಳನ್ನು ಕಾನೂನಿನ ಚೌಕಟ್ಟಿನಲ್ಲಿ ಮುಂದುವರಿಸುತ್ತಾ ಇದೆ.

ಶ್ರೀ ವೇದಾಂತ ಹೆಬ್ಬಾರ್. ಸ್ವಾಮಿ, ಪ್ರಮುಖವಾದ್ಯಮ ಇಲಾಖೆ ಇದೆ. ಆ ಇಲಾಖೆಗೆ ಪ್ರವಾಸಿಗರಿಂದ ಸಾಕಷ್ಟು ಆದಾಯ ಕೂಡ ಬರುತ್ತದೆ. ಬೆಳಗಿರಂಗನ ಬೆಟ್ಟಕ್ಕೆ ಸಾಕಷ್ಟು ಜನ ಪ್ರವಾಸಿಗರು ಹೋಗುತ್ತಾರೆ. ಪ್ರವಾಸೋದ್ಯಮ ಇಲಾಖೆಯ ವತಿಯಿಂದ ಕನಿಷ್ಠಪಕ್ಷ ೨೫ ರೂಪಾಯಿಗಳು ಇರತಕ್ಕ ಒಂದು ಕಟ್ಟಡವನ್ನು ಕಟ್ಟಿಸಿ, ಪ್ರವಾಸಿಗರಿಗೆ ಅನುಕೂಲ ಮಾಡಿಕೊಡುವ ಬಗ್ಗೆ ಸರ್ಕಾರದವರು ಪ್ರಯತ್ನ ಮಾಡುವರೆ?